ನಿ-72 (1)

**ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ಪುಟ್ಟಣ್ಣ ಇವರು ನಿಯಮ 72 ರ ಮೇರೆಗೆ ನೀಡಿರುವ ಸೂಚನಾ ಪತ್ರಕ್ಕೆ ಮಾನ್ಯ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರ ಹೇಳಿಕೆ**

| | |
|---|---|
| ವಿಷಯ: | ಅನುದಾನಿತ ಕೈಗಾರಿಕಾ ತರಬೇತಿ ಕೇಂದ್ರಗಳ ನೌಕರರಿಗೆ ಶ್ರೀ ಥಾಮಸ್ ನೇತೃತ್ವದ ವರದಿಯಲ್ಲಿನ ಶಿಫಾರಸ್ಸನ್ನು ಸಚಿವ ಸಂಪುಟದಲ್ಲಿ ಒಪ್ಪಿಕೊಂಡು ಇತರೆ ಅನುದಾನಿತ ಶಿಕ್ಷಣ ಸಂಸ್ಥೆಗಳಿಗೆ ನೀಡಿರುವಂತೆ ಶೇಕಡಾ 100 ರಷ್ಟು ವೇತನಾನುದಾನ, ಪಿಂಚಣಿ ಮತ್ತು ನಿವೃತ್ತಿ ಸೌಲಭ್ಯಗಳು, ಸೇವಾ ಸೌಲಭ್ಯಗಳು ಹಾಗೂ ಸೇವಾ ನಿಯಮಗಳನ್ನು (ಅನುದಾನ ಸಂಹಿತೆ) ನೀಡಲು ಡಿಸೆಂಬರ್ 2014 ರಲ್ಲಿ ಜಾರಿಗೊಳಿಸಲು ಆದೇಶಿಸಲಾಗಿದೆ. ಆದರೆ ಇಲಾಖೆಯು ಇದುವರೆವಿಗೆ ಸದರಿ ನೌಕರರಿಗೆ ಕೆಲವು ಸೌಲಭ್ಯಗಳನ್ನು ಮಾತ್ರ ಮಂಜೂರು ಮಾಡಿದ್ದು, ಹೆರಿಗೆ ಭತ್ಯೆ ರಜೆ ಮಂಜೂರು ಮಾಡದಿರುವುದು ಸೇವಾ ನಿಯಮಗಳು ಇದುವರೆವಿಗೆ ರೂಪಿಸದೆ ಇರುವುದರಿಂದ ಸದರಿ ನೌಕರರಿಗೆ ಉಂಟಾಗಿರುವ ಸಮಸ್ಯೆಗಳ ಬಗ್ಗೆ ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ ಉನ್ನತ ಶಿಕ್ಷಣ, ಮಾಹಿತಿ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರ ಗಮನ ಸೆಳೆಯ ಬಯಸುತ್ತೇನೆ. |

* * *

ಪ್ರೊ. ಪಿ.ಎಸ್.ಎಸ್.ಥಾಮಸ್ ವರದಿಯ ಶಿಫಾರಸ್ಸುಗಳನ್ನು ಖಾಸಗಿ ಅನುದಾನಿತ ಕೈಗಾರಿಕಾ ತರಬೇತಿ ಸಂಸ್ಥೆಗಳಲ್ಲಿ ಅನುಷ್ಠಾನಗೊಳಿಸುವ ಸಂಬಂಧ ಹಾಲಿ ಚಾಲ್ತಿಯಲ್ಲಿರುವ 1997 ರ ಅನುದಾನ ಸಂಹಿತೆಯನ್ನು ಪರಿಷ್ಕರಿಸಲಾಗುತ್ತಿದ್ದು, ನಿಯಮಾವಳಿಗಳು ಪರಿಶೀಲನೆ ಹಂತದಲ್ಲಿರುತ್ತದೆ. ಸದರಿ ಪರಿಷ್ಕೃತ ಅನುದಾನ ಸಂಹಿತೆಯಲ್ಲಿ ಸರ್ಕಾರಿ ನೌಕರರಿಗೆ ಅನ್ವಯಿಸುವ ಎಲ್ಲಾ ರಜೆಗಳನ್ನು ಖಾಸಗಿ ಅನುದಾನಿತ ಸಿಬ್ಬಂದಿಗಳಿಗೂ ಸಹ ಅನ್ವಯಿಸುವಂತೆ ನಿಯಮಗಳನ್ನು ರೂಪಿಸಲು ಕ್ರಮವಹಿಸಲಾಗುವುದು.

* * * *

**ಕೌಉಜೀಇ 03 ಕೈತಪ್ರ 2021**

(ಡಾ.ಸಿ.ಎನ್.ಅಶ್ವಥ್ ನಾರಾಯಣ)
ಉಪ ಮುಖ್ಯಮಂತ್ರಿಗಳು ಹಾಗೂ
ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು
ಜೀವನೋಪಾಯ ಸಚಿವರು